# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 17-01-2020ರ ಶುಕ್ರವಾರದಂದು ಪೂರ್ವಾಹ್ನ 11-00 ಗಂಟೆಗೆ ಜರುಗಿದ ಸಿಂಡಿಕೇಟ್‌ನ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಿದ್ದ ಸದಸ್ಯರು:**

1. ಪ್ರೊ. ಜಿ. ಹೇಮಂತಕುಮಾರ್ – ಕುಲಪತಿಗಳು ಹಾಗೂ ಅಧ್ಯಕ್ಷರು
2. ಶ್ರೀ ಆರ್. ಮೂಗೇಶಪ್ಪ – ಸದಸ್ಯರು<br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ,<br>ಬೆಂಗಳೂರು
3. ಡಾ. ಎಸ್. ಮದಿಅಳಗನ್ – ಸದಸ್ಯರು
4. ಕು. ಸಹನಾ ಶಿವಪ್ಪ – ಸದಸ್ಯರು
5. ಶ್ರೀ. ಸಿ. ಜಯರಾಮ – ಸದಸ್ಯರು
6. ಡಾ. ಕೆ.ಕೆ. ವಿಶಾಲಾಕ್ಷಿ – ಸದಸ್ಯರು
7. ಶ್ರೀ. ಆರ್. ಪ್ರದೀಪ್ ಕುಮಾರ್ ದೀಕ್ಷಿತ್ – ಸದಸ್ಯರು
8. ಪ್ರೊ. ಎಸ್.ಡಿ. ದೊಡ್ಡಾಚಾರಿ – ಸದಸ್ಯರು
9. ಶ್ರೀಮತಿ ಸಿಂಧು ಸುರೇಶ್ – ಸದಸ್ಯರು
10. ಡಾ. ಈ.ಸಿ. ನಿಂಗರಾಜ್ ಗೌಡ – ಸದಸ್ಯರು
11. ಡಾ. ಎಂ.ಎಸ್. ದಾಮೋಧರ್ – ಸದಸ್ಯರು
12. ಡಾ. ಸೈಯದ್ ಕಾರ್ಝಾ ಮೊಹಿದ್ದಿನ್ – ಸದಸ್ಯರು
13. ಪ್ರೊ. ಕೆ.ಎಂ. ಮಹದೇವನ್ – ಸದಸ್ಯರು<br>ಕುಲಸಚಿವರು (ಪರೀಕ್ಷಾಂಗ)
14. ಪ್ರೊ. ಟಿ.ಎಸ್. ದೇವರಾಜ – ವಿಶೇಷ ಆಹ್ವಾನಿತರು
15. ಪ್ರೊ. ಆರ್. ಶಿವಪ್ಪ – ಕುಲಸಚಿವರು ಹಾಗು ಸದಸ್ಯ ಕಾರ್ಯದರ್ಶಿಗಳು

**ಹಾಜರಾಗದ ಸದಸ್ಯರು:**

16. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
17. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
18. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
19. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ

ಮೊದಲಿಗೆ ಇತ್ತೀಚೆಗೆ ನಿಧನರಾದ ಕರ್ನಾಟಕ ಸರ್ಕಾರದ ಘನತೆವೆತ್ತ ಮಾಜಿ ರಾಜ್ಯಪಾಲರು ಹಾಗೂ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳಾದ ಶ್ರೀ ಟಿ.ಎನ್.ಚರ್ತುವೇದಿಯವರ ಗೌರವಾರ್ಥ ಎರಡು ನಿಮಿಷಗಳ ಕಾಲ ಮೌನವನ್ನಾಚರಿಸಲಾಯಿತು.

ನಂತರ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ಮೊದಲನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಹೊಸದಾಗಿ ಕರ್ನಾಟಕ ಸರ್ಕಾರದಿಂದ ಸಿಂಡಿಕೇಟಿಗೆ ನಾಮನಿರ್ದೇಶನಗೊಂಡಿರುವ ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್, ಚಾಮರಾಜನಗರ, ಪ್ರೊ. ಎಸ್.ಡಿ.ದೊಡ್ಡಾಚಾರಿ, ಮಂಡ್ಯ, ಶ್ರೀಮತಿ ಸಿಂಧು ಸುರೇಶ್, ಮೈಸೂರು, ಡಾ. ಈ.ಸಿ.ನಿಂಗರಾಜ್ ಗೌಡ,

ಮೈಸೂರು, ಡಾ. ಎಂ.ಎಸ್.ದಾಮೋಧರ, ಹಾಸನ ಮತ್ತು ಡಾ. ಸೈಯದ್ ಕಾರ್ಯಾ ಮೊಹಿದ್ದಿನ್, ಬೆಂಗಳೂರು ಇವರನ್ನು ಸಹ ಸ್ವಾಗತಿಸಿ ಸಭೆಗೆ ಪರಿಚಯಿಸಿದರು.

ಹಾಗೂ ಇದುವರೆವಿಗೂ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಶ್ರೀ ಜಿ.ಅಶ್ವಥನಾರಾಯಣ, ಪ್ರಾಂಶುಪಾಲರು ಮತ್ತು ಶ್ರೀ ಕೆ.ಟಿ.ಅಪ್ಪಾಜಪ್ಪ, ಪ್ರಾಂಶುಪಾಲರು ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ನಂತರ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ವಿಷಯ ಸಂಖ್ಯೆ: I | ದಿನಾಂಕ 09-12-2019ರಂದು ನಡೆದ ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ 09-12-2019ರಂದು ನಡೆದ ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು. |
| **2020/1.1** | ಪ್ರೊ. ಖೈಸರ್ ಜಹಾನ್ ಬೇಗಂ ಅಭಿನಂದನಾ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಅಧ್ಯಕ್ಷರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ತಮ್ಮ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತರಾದ ಪ್ರೊ. ಖೈಸರ್ ಜಹಾನ್ ಬೇಗಂ ಅವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲು ರೂ. 1,00,000/- ಹಾಗೂ ಮುಂಬರುವ 100ನೇ ಘಟಿಕೋತ್ಸವದಲ್ಲಿ ಸದರಿ ಚಿನ್ನದ ಪದಕವನ್ನು ಅರ್ಹ ಅಭ್ಯರ್ಥಿಗೆ ನೀಡುವ ಸಲುವಾಗಿ ರೂ. 5000/-ಗಳ ಹೆಚ್ಚುವರಿ ಡಿ.ಡಿಯನ್ನು ನೀಡಲಾಗಿದ್ದು ದಾನಿಗಳು ದತ್ತಿಯ ನಿಬಂಧನೆಯಲ್ಲಿ ಸೂಚಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. 80ರಷ್ಟು ಹಣವನ್ನು M.Sc in Library and Information Science ಸ್ನಾತಕೋತ್ತರ ಪದವಿಯಲ್ಲಿ ಅತಿ ಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಸಲುವಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ **"ಪ್ರೊ. ಖೈಸರ್ ಜಹಾನ್ ಬೇಗಂ ಅಭಿನಂದನಾ ಚಿನ್ನದ ಪದಕ ದತ್ತಿ"**ಯನ್ನು ಸ್ಥಾಪಿಸಲು ಸಿಂಡಿಕೇಟ್ ಅನುಮೋದಿಸಿತು. |
| **2020/1.2** | ಡಾ. ಲಲಿತಾ ರಂಗರಾಜನ್, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಸಂಶೋಧನಾ ವಿದ್ಯಾರ್ಥಿಗಳು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ತಮ್ಮ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ನಿವೃತರಾದ ಡಾ. ಲಲಿತಾ ರಂಗರಾಜನ್, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲು ರೂ. 1,00,000/- ಹಾಗೂ ಮುಂಬರುವ 100ನೇ ಘಟಿಕೋತ್ಸವದಲ್ಲಿ ಸದರಿ ಚಿನ್ನದ ಪದಕವನ್ನು ಅರ್ಹ ಅಭ್ಯರ್ಥಿಗೆ ನೀಡಬೇಕೆಂದು ರೂ. 5000/-ಗಳ ಹೆಚ್ಚುವರಿ ಡಿ.ಡಿಯನ್ನು ನೀಡಲಾಗಿದ್ದು ದಾನಿಗಳು ದತ್ತಿಯ ನಿಬಂಧನೆಯಲ್ಲಿ ಸೂಚಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. 80ರಷ್ಟು ಹಣವನ್ನು ವಿಭಾಗದಲ್ಲಿನ M.Sc (CS), M.Tech(CST) & MCA ಸ್ನಾತಕೋತ್ತರ ಪದವಿಗಳಲ್ಲೊಂದರಲ್ಲಿ ಅತಿ ಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ಪ್ರತಿ ವರ್ಷ ಚಿನ್ನದ ಪದಕವನ್ನು ನೀಡುವ ಸಲುವಾಗಿ **"ಡಾ. ಲಲಿತಾ ರಂಗರಾಜನ್, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಚಿನ್ನದ ಪದಕ ದತ್ತಿ"**ಯನ್ನು ಸ್ಥಾಪಿಸಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2020/1.3** | ಪ್ರೊ. ಎ. ಬಾಲಸುಬ್ರಮಣ್ಯನ್ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ |
| **ತೀರ್ಮಾನ** | ಡಾ. ಎಂ.ರುದ್ರಯ್ಯ, ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ಇವರು ಭೂವಿಜ್ಞಾನ ಅಧ್ಯಯನ ವಿಭಾಗದ ಹಿರಿಯ ವಿದ್ಯಾರ್ಥಿಗಳ ಪರವಾಗಿ ಸದರಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತರಾದ ಪ್ರೊ. ಎ. ಬಾಲಸುಬ್ರಮಣ್ಯನ್ ಇವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲು ರೂ. 1,00,000/- ಹಾಗೂ ಮುಂಬರುವ 100ನೇ ಘಟಿಕೋತ್ಸವದಲ್ಲಿ ಸದರಿ ಚಿನ್ನದ ಪದಕವನ್ನು ಅರ್ಹ ಅಭ್ಯರ್ಥಿಗೆ ನೀಡುವ ಸಲುವಾಗಿ ರೂ. 5000/-ಗಳ ಹೆಚ್ಚುವರಿ ಡಿ.ಡಿಯನ್ನು ನೀಡಲಾಗಿದ್ದು, ದಾನಿಗಳು ದತ್ತಿಯ ನಿಬಂಧನೆಯಲ್ಲಿ ಸೂಚಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. 80ರಷ್ಟು ಹಣವನ್ನು M.Sc. Geology ಸ್ನಾತಕೋತ್ತರ ಪದವಿಯ Hydrogeology ಎಂಬ ಪತ್ರಿಕೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ಪ್ರತಿ ವರ್ಷ ಚಿನ್ನದ ಪದಕವನ್ನು ನೀಡುವ ಸಲುವಾಗಿ **"ಪ್ರೊ. ಎ. ಬಾಲಸುಬ್ರಮಣ್ಯನ್ ಚಿನ್ನದ ಪದಕ ದತ್ತಿ"**ಯನ್ನು ಸ್ಥಾಪಿಸಲು ಸಿಂಡಿಕೇಟ್ ಅನುಮೋದಿಸಿತು. |
| **2020/1.4** | ಡಾ. ವೈ. ಎಸ್. ಸಿದ್ದೇಗೌಡ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಅಧ್ಯಕ್ಷರು, ಸಮಾಜಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸದರಿ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಡಾ. ವೈ.ಎಸ್.ಸಿದ್ದೇಗೌಡ ರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲು ರೂ. 1,00,000/- ಹಾಗೂ ಮುಂಬರುವ 100ನೇ ಘಟಿಕೋತ್ಸವದಲ್ಲಿ ಸದರಿ ಚಿನ್ನದ ಪದಕವನ್ನು ಅರ್ಹ ಅಭ್ಯರ್ಥಿಗೆ ನೀಡುವ ಸಲುವಾಗಿ ರೂ. 5000/-ಗಳ ಹೆಚ್ಚುವರಿ ಡಿ.ಡಿಯನ್ನು ನೀಡಲಾಗಿದ್ದು, ದಾನಿಗಳು ದತ್ತಿಯ ನಿಬಂಧನೆಯಲ್ಲಿ ಸೂಚಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. 80ರಷ್ಟು ಹಣವನ್ನು ಪ್ರತಿ ವರ್ಷ M.S.W ಸ್ನಾತಕೋತ್ತರ ಪದವಿಯಲ್ಲಿ ಅತಿ ಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಸಲುವಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ **"ಡಾ. ವೈ. ಎಸ್. ಸಿದ್ದೇಗೌಡ ಚಿನ್ನದ ಪದಕ ದತ್ತಿ"** ಸ್ಥಾಪಿಸಲು ಸಿಂಡಿಕೇಟ್ ಅನುಮೋದಿಸಿತು. |
| **2020/1.5** | ಪ್ರೊ. ಎಸ್. ಎಲ್. ಬೆಳಗಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ |
| **ತೀರ್ಮಾನ** | ಪ್ರೊ. ಎಸ್.ಎಲ್. ಬೆಳಗಲಿ ಅಭಿನಂದನಾ ಸಮಿತಿ, ಪರಿಸರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಪರಿಸರ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪ್ರೊ. ಎಸ್.ಎಲ್. ಬೆಳಗಲಿ ಅವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲು ರೂ. 1,50,000/- ಹಾಗೂ ಮುಂಬರುವ 100ನೇ ಘಟಿಕೋತ್ಸವದಲ್ಲಿ ಸದರಿ ಚಿನ್ನದ ಪದಕವನ್ನು ಅರ್ಹ ಅಭ್ಯರ್ಥಿಗೆ ನೀಡುವ ಸಲುವಾಗಿ ರೂ. 5000/-ಗಳ ಹೆಚ್ಚುವರಿ ಡಿ.ಡಿಯನ್ನು ನೀಡಲಾಗಿದ್ದು, ದಾನಿಗಳು ದತ್ತಿಯ ನಿಬಂಧನೆಯಲ್ಲಿ ಸೂಚಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ ಉಳಿದ ಶೇ. 80ರಷ್ಟು ಹಣವನ್ನು M.Sc. Environment Science ಸ್ನಾತಕೋತ್ತರ ಪದವಿಯ Environment Chemistry ಸಂಬಂಧಿತ ಪತ್ರಿಕೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಸಲುವಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ **"ಪ್ರೊ. ಎಸ್. ಎಲ್. ಬೆಳಗಲಿ ಚಿನ್ನದ ಪದಕ ದತ್ತಿ"** ಸ್ಥಾಪನೆ ಮಾಡಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2020/1.6** | ರಾಜಣ್ಣ ಎಲ್. ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| **ತೀರ್ಮಾನ** | ರಾಜಣ್ಣ ಎಲ್. ಇವರ ಪಿಎಚ್.ಡಿ ಸಂಶೋಧನಾ ಅವಧಿಯು ದಿನಾಂಕ 23-01-2020ಕ್ಕೆ 07 ವರ್ಷಗಳು ಪೂರ್ಣಗೊಳ್ಳಲಿದ್ದು ಮೋಟಾರ್ ಸೈಕಲ್ ಅಪಘಾತದಿಂದ ಸಂಶೋಧನೆಯು ಸ್ವಲ್ಪ ಕಾಲ ಸ್ಥಗಿತಗೊಂಡಿದ್ದರಿಂದ ನಿಗದಿತ ಸಮಯದೊಳಗೆ ಮಹಾಪ್ರಬಂಧವನ್ನು ಸಲ್ಲಿಸಲು ಸಾಧ್ಯವಾಗದ ಕಾರಣ ಹೆಚ್ಚುವರಿ 06 ತಿಂಗಳುಗಳ ಕಾಲಾವಕಾಶ ಕೋರಿರುವ ಹಿನ್ನೆಲೆಯಲ್ಲಿ ಸಿಂಡಿಕೇಟ್ ಸಭೆಯು ಇದನ್ನು ಗಮನಿಸಿ ವಿಷಯ/ಮಾರ್ಗದರ್ಶಕರ ವಿವರಗಳನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸೂಚಿಸಿತ್ತು ಹಾಗೂ ರೂ. 25,000/- ದಂಡ ಶುಲ್ಕದೊಂದಿಗೆ 06 ತಿಂಗಳುಗಳ ಕಾಲಾವಕಾಶ ನೀಡಲು ಅನುಮೋದಿಸಿತು. |
| **2020/1.7** | ಶ್ರೀ ಸತ್ಯನಾರಾಯಣ ಆರ್., ಪ್ರಥಮ ದರ್ಜೆ ಗುಮಾಸ್ತರು, ಇವರ ಅಮಾನತ್ತಿನ ಅವಧಿಯನ್ನು ಸೇವೆ ಎಂದು ಪರಿಗಣಿಸಿ ಆರ್ಥಿಕ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ. |
| **ತೀರ್ಮಾನ** | ಮೈಸೂರಿನ ಮೊದಲನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ತೀರ್ಪಿನಂತೆ ಶ್ರೀ ಸತ್ಯನಾರಾಯಣ.ಆರ್ ಪ್ರ.ದ.ಗು. ಇವರಿಗೆ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ವಿಧಿಸಿರುವ ಶಿಕ್ಷೆಯನ್ನು ಹಿಂಪಡೆದು ಅವರ ಅಮಾನತ್ತಿನ ಅವಧಿಯನ್ನು ಸೇವಾ ಅವಧಿ ಎಂದು ಪರಿಗಣಿಸಿ ಆರ್ಥಿಕ ಸೌಲಭ್ಯವನ್ನು ವಿಸ್ತರಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.8** | ನೆರೆ ಹಾವಳಿಯಿಂದ ಹಾನಿಗೊಳಗಾದ ಪ್ರದೇಶಗಳಲ್ಲಿ ಉನ್ನತ ಶಿಕ್ಷಣ ಪಡೆದ/ ಪಡೆಯುತ್ತಿರುವ ವಿದ್ಯಾರ್ಥಿಗಳ ಅಂಕಪಟ್ಟಿ ಹಾಳಾಗಿರುವ ಕಾರಣಕ್ಕೆ ಪುನಃ ಅಂಕಪಟ್ಟಿಗೆ ಮನವಿ ಸಲ್ಲಿಸಿದಲ್ಲಿ ಅಂಕಪಟ್ಟಿಗಳನ್ನು ಉಚಿತವಾಗಿ ವಿತರಿಸುವ ಬಗ್ಗೆ. |
| **ತೀರ್ಮಾನ** | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು ಹಾಗೂ ಶ್ರೀ ರವಿಕುಮಾರ್ ಎನ್, ವಿಧಾನ ಪರಿಷತ್ತಿನ ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು ಇವರ ಪತ್ರದ ಶಿಫಾರಸ್ಸಿನ ಅನ್ವಯ ನೆರೆ ಹಾವಳಿಯಿಂದ ಹಾನಿಗೊಳಗಾದ ಪ್ರದೇಶಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಉನ್ನತ ಶಿಕ್ಷಣ ಪಡೆದ/ ಪಡೆಯುತ್ತಿರುವ ವಿದ್ಯಾರ್ಥಿಗಳ ಅಂಕಪಟ್ಟಿ ಹಾಳಾಗಿರುವ ಕಾರಣಕ್ಕೆ ಪುನ: ಅಂಕಪಟ್ಟಿಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿದಲ್ಲಿ ಅಂಕಪಟ್ಟಿಗಳನ್ನು ಉಚಿತವಾಗಿ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.9** | ದಿವಂಗತ ಶ್ರೀ ರಂಗ, ಪರಿಚಾರಕ, ವಿ.ವಿ. ಗ್ರಂಥಾಲಯ, ಮಾ.ಗಂ, ಮೈಸೂರು ಅವರ ಮಗನಾದ ಶ್ರೀ ರಮೇಶ್‌ರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ |
| **ತೀರ್ಮಾನ** | ಶ್ರೀ ರಂಗ, ಪರಿಚಾರಕ, ವಿ.ವಿ. ಗ್ರಂಥಾಲಯ, ಮಾನಸಗಂಗೋತ್ರಿ, ಮೈಸೂರು ಇವರು ಸೇವೆಯಲ್ಲಿದ್ದಾಗಲೇ ನಿಧನ ಹೊಂದಿದ್ದು ಅವರ ಮಗನಾದ ಶ್ರೀ. ರಮೇಶ್ ರವರು ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿರುವುದಿರಂದ ವಿ.ವಿ.ಅಧಿನಿಯಮಗಳ ಸೆಕ್ಷನ್ 4(1)ರ ಅನ್ವಯ ಶ್ರೀ ರಮೇಶ್ ಅವರಿಗೆ ಅನುಕಂಪದ ಆಧಾರದ ಮೇಲೆ ಪರಿಚಾರಕರಾಗಿ ನೇಮಕ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| **2020/1.10** | ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸಿರುವ ಬಗ್ಗೆ ಅನುಸಮರ್ಥನೆಗಾಗಿ. |
| **ತೀರ್ಮಾನ** | ಪ್ರೊ. ಎನ್.ಎಂ ತಳವಾರ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರ ನಂತರ ವಿಭಾಗದಲ್ಲಿ ಜೇಷ್ಠತೆಯ ಪಟ್ಟಿಯಲ್ಲಿ ಹಿರಿಯರಾಗಿರುವ ಡಾ. ಪಿ.ಪದ್ಮಾವತಿ, ಸಹ ಪ್ರಾಧ್ಯಾಪಕರು ಅವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕರಣದಡಿ ದಿನಾಂಕ 01-01-2020ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ |

| | |
|---|---|
| | ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2020/1.11** | ಒಂದು ವರ್ಷದ M.Ed.,SPL.Ed (HI) ವ್ಯಾಸಂಗವನ್ನು ಎರಡು ವರ್ಷಗಳಿಗೆ ವಿಸ್ತರಿಸಿರುವ ಸಂಬಂಧ ವಿನಿಯಮಾವಳಿಗೆ ಅನುಮೋದನೆ ಪಡೆಯುವ ಬಗ್ಗೆ. |
| **ತೀರ್ಮಾನ** | ಅಖಿಲ ಭಾರತ ವಾಕ್ ಶ್ರವಣ (AIISH) ಸಂಸ್ಥೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಒಂದು ವರ್ಷದ M.Ed.,SPL.Ed(HI) ಕೋರ್ಸ್‌ನ್ನು ಎರಡು ವರ್ಷಗಳಿಗೆ ವಿಸ್ತರಿಸುವ ಸಂಬಂಧ ರಚಿಸಲಾಗಿರುವ ವಿನಿಯಮಾವಳಿಗಳನ್ನು ಅನುಮೋದಿಸಿದ ಸಿಂಡಿಕೇಟ್ ಮಾನ್ಯ ಕುಲಾಧಿಪತಿಗಳ ಅಂಕಿತ ದೊರಕಿಸಿಕೊಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಿತು. |
| **2020/1.12** | ಶ್ರೀಮತಿ ಗಾಯತ್ರಿ ಬಾಯಿ ಬಿ ಎಸ್., ದ್ವಿತೀಯ ದರ್ಜೆ ಗುಮಾಸ್ತರು, ತುಮಕೂರು ವಿಶ್ವವಿದ್ಯಾನಿಲಯ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಹಾಸನ ಇಲ್ಲಿಗೆ ನಿಯೋಜನೆ ಮೇಲೆ ತೆಗೆದುಕೊಳ್ಳುವ ಬಗ್ಗೆ |
| **ತೀರ್ಮಾನ** | ಶ್ರೀಮತಿ ಗಾಯತ್ರಿ ಬಾಯಿ ಬಿ ಎಸ್., ದ್ವಿತೀಯ ದರ್ಜೆ ಗುಮಾಸ್ತರು, ತುಮಕೂರು ವಿಶ್ವವಿದ್ಯಾನಿಲಯ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಹಾಸನ ಇಲ್ಲಿಗೆ ನಿಯೋಜನೆ ಮೇಲೆ ತೆಗೆದುಕೊಳ್ಳುವ ಬಗ್ಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ ಹೆಚ್ಚಾಗುವುದನ್ನು ಕೂಲಂಕಷವಾಗಿ ಗಮನಿಸಿದ ಸಭೆಯು ಶ್ರೀಮತಿ ಗಾಯತ್ರಿ ಬಾಯಿ ಬಿ ಎಸ್., ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಹಾಸನ ಇಲ್ಲಿಗೆ ನಿಯೋಜನೆ ಮೇಲೆ ತೆಗೆದುಕೊಳ್ಳಲು ಸಿಂಡಿಕೇಟ್ ಸಭೆಯು ಅಸಮ್ಮತಿಸಿ, ಈ ವಿಷಯದ ಬಗ್ಗೆ ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯು ತೀರ್ಮಾನಿಸಿತು. |
| **2020/1.13** | ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗ ಮತ್ತು ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ ಈ ಮೂರು ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕರಣದಡಿ ನೇಮಕಗೊಂಡಿದ್ದ ಪ್ರೊ. ಎಂ.ಭಾಗ್ಯ, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಅಧ್ಯಕ್ಷ ಹುದ್ದೆಯ ಅವಧಿಯು ದಿನಾಂಕ 31-01-2020ಕ್ಕೆ ಅಂತ್ಯಗೊಳ್ಳುತ್ತಿರುವುದರಿಂದ ತದನಂತರ ವಿಭಾಗದಲ್ಲಿ ಜೇಷ್ಠತೆಯ ಪಟ್ಟಿಯಲ್ಲಿ ಹಿರಿಯರಾಗಿರುವ ಪ್ರೊ. ಎಸ್.ಎಸ್. ಮಾಲಿನಿ ಅವರನ್ನು ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನಿಯಮಾನುಸಾರ 1-2-2020ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ನೇಮಕ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.<br><br>ಪ್ರೊ. ಅಸ್ನಾ ಉರೂಜ್, ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಅಧ್ಯಕ್ಷ ಅವಧಿಯು ದಿನಾಂಕ 29-02-2020ಕ್ಕೆ ಅಂತ್ಯಗೊಳ್ಳುತ್ತದೆ. ಆದರೆ ಆಹಾರ ವಿಜ್ಞಾನ ಮತ್ತು ಪೌಷ್ಠಿಕತೆ ಅಧ್ಯಯನ ವಿಭಾಗವು 50 ವರ್ಷಗಳನ್ನು ಪೂರೈಸುತ್ತಿರುವ ಸಂದರ್ಭದಲ್ಲಿ ವಿಶೇಷ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕಾದ ಹಿನ್ನೆಲೆಯಲ್ಲಿ ಪ್ರೊ. ಅಸ್ನಾ ಉರೂಜ್‌ರವರನ್ನು ವಿಶೇಷ ಸಂದರ್ಭವೆಂದು ಪರಿಗಣಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಅಡಿಯಲ್ಲಿ ಮತ್ತೊಂದು ವರ್ಷದ ಅವಧಿಗೆ (ಅಂದರೆ 28-02-2021ರವರೆಗೆ) ವಿಭಾಗದ ಅಧ್ಯಕ್ಷರನ್ನಾಗಿ ಮುಂದುವರೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br><br>ತದನಂತರ ವಿಭಾಗದಲ್ಲಿ ಜೇಷ್ಠತೆಯ ಪಟ್ಟಿಯಲ್ಲಿ ಹಿರಿಯರಾಗಿರುವ ಡಾ. ಎಂ.ಕೋಮಲ, ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗ, ಅವರನ್ನು ವಿಭಾಗದ ಅಧ್ಯಕ್ಷರನ್ನಾಗಿ ಎರಡು |

| | |
|---|---|
| | ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಅಂದರೆ 1-3-2021ರಿಂದ 28-02-2023ರವರೆಗೆ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಅಡಿಯಲ್ಲಿ ಡಾ. ನಿಂಗಮ್ಮ ಸಿ.ಬೆಟ್ಸೂರ್, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಅಧ್ಯಕ್ಷ ಅವಧಿಯು ದಿನಾಂಕ 29-02-2020ಕ್ಕೆ ಅಂತ್ಯಗೊಳ್ಳುತ್ತಲಿದ್ದು ತದನಂತರ ವಿಭಾಗದ ಜೇಷ್ಠತೆಯ ದಾಖಲೆಗಳನ್ನು ಪರಿಶೀಲಿಸಿದ ಸಿಂಡಿಕೇಟ್ ಡಾ. ಕೆ.ಬಿ.ಪ್ರವೀಣ, ಸಹ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ ಅವರನ್ನು ವಿಭಾಗದ ಅಧ್ಯಕ್ಷರನ್ನಾಗಿ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.14** | ಮೈಸೂರು ವಿಶ್ವವಿದ್ಯಾನಿಲಯದ ಆಡಿಟ್ ವಿಭಾಗಕ್ಕೆ ನಿವೃತ್ತ ಲೆಕ್ಕಪರಿಶೋಧನಾಧಿಕಾರಿಯವರನ್ನು ಒಂದು ವರ್ಷದ ಅವಧಿಗೆ ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ 1988ರಿಂದ ತಹಲ್‌ವರೆಗೆ ಆಡಿಟ್ ಆಕ್ಷೇಪಣೆಗಳಿಗೆ ಉತ್ತರವನ್ನು ಸಲ್ಲಿಸುವುದಕ್ಕಾಗಿ ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ನಿಗದಿತ ಕಾಲಾವಧಿಯೊಳಗೆ ವಿಧಾನ ಮಂಡಲಕ್ಕೆ ಸಲ್ಲಿಸಲು ಅನುವಾಗುವಂತೆ ಹಾಗೂ ಲೆಕ್ಕ ಪರಿಶೋಧನಾ ಆಕ್ಷೇಪಣೆಗಳನ್ನು ಆದಷ್ಟು ಶೀಘ್ರವಾಗಿ ಇತ್ಯರ್ಥಪಡಿಸುವ ಸಂಬಂಧ ಶ್ರೀ ಎಸ್.ಲಿಂಗಯ್ಯ, ನಿವೃತ್ತ ಲೆಕ್ಕ ಪರಿಶೋಧನಾಧಿಕಾರಿ, ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಮೈಸೂರು ಇವರನ್ನು 1988-89ನೇ ಸಾಲಿನಿಂದ 2016-17ನೇ ಸಾಲಿನವರೆಗೆ ಇರುವ ಆಡಿಟ್ ಆಕ್ಷೇಪಣೆಯ ಮತ್ತು ವಸೂಲಾತಿಯ ಮೊತ್ತಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಶ್ರೀ ಎಸ್.ಲಿಂಗಯ್ಯ, ನಿವೃತ್ತ ಲೆಕ್ಕಪರಿಶೋಧನಾಕಾರಿಗಳು ಇವರನ್ನು ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.15** | ದಿನಾಂಕ 21-08-2020ರ "ಸ್ವರ್ಣಗೌರಿ" ಹಬ್ಬದ ದಿನವನ್ನು ಮೈಸೂರು ವಿಶ್ವವಿದ್ಯಾನಿಲಯವು ಸ್ಥಳೀಯ ರಜೆ ಎಂದು ಘೋಷಿಸುವ ಬಗ್ಗೆ. |
| **ತೀರ್ಮಾನ** | ಪ್ರತಿ ವರ್ಷ ಸ್ವರ್ಣಗೌರಿ ವ್ರತ ಹಬ್ಬದ ದಿನವನ್ನು ಮೈಸೂರು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಸ್ಥಳೀಯ ಸಾರ್ವತ್ರಿಕ ರಜೆ ದಿನವೆಂದು ಹಿಂದಿನಿಂದಲೂ ಘೋಷಿಸಲಾಗುತ್ತಿರುವುದರಿಂದ ಈ ವರ್ಷದಲ್ಲೂ ದಿನಾಂಕ 21-8-2020ರ ಶುಕ್ರವಾರದಂದು ಬರುವ "ಸ್ವರ್ಣಗೌರಿ ವ್ರತ"ದ ದಿನವನ್ನು ವಿಶ್ವವಿದ್ಯಾನಿಲಯಕ್ಕೆ ಸ್ಥಳೀಯ ರಜೆ ಎಂದು ಘೋಷಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.16** | University of Mysore and The National Mission for Manuscripts, New Delhi ಇವುಗಳ ನಡುವೆ "Preserving and conserving the centuries old Manuscripts ಬಗ್ಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ |
| **ತೀರ್ಮಾನ** | University of Mysore and The National Mission for Manuscripts, New Delhi ಇವುಗಳ ನಡುವೆ "Preserving and conserving the centuries old Manuscripts ಬಗ್ಗೆ ಒಡಂಬಡಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು ಹಾಗೂ ಕಾರ್ಯಗತಗೊಳ್ಳುವ ಯೋಜನೆಯ ಪ್ರಗತಿಯ ವರದಿಯನ್ನು ಪ್ರತಿ ಮೂರು ಅಥವಾ ಆರು ತಿಂಗಳಿಗೊಮ್ಮೆ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸಭೆಯು ತೀರ್ಮಾನಿಸಿತು. |
| **2020/1.17** | ಶ್ರೀಮತಿ ನಿರ್ಮಲ, ಶೀಘ್ರಲಿಪಿಗಾರರು, ಆಡಳಿತ ವಿಭಾಗ ಇವರು ದುಬೈ ದೇಶಕ್ಕೆ ಪ್ರವಾಸ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ. |

| | |
|---|---|
| ತೀರ್ಮಾನ | ಶ್ರೀಮತಿ ನಿರ್ಮಲ, ಶೀಘ್ರಲಿಪಿಗಾರರು, ಆಡಳಿತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಖಾಸಗಿಯಾಗಿ ತಮ್ಮ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ದಿನಾಂಕ 06-02-2020 ರಿಂದ 11-02-2020ರವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ದುಬೈ ದೇಶಕ್ಕೆ ಪ್ರವಾಸಕ್ಕೆ ಹೋಗಿಬರಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.18** | ಡಾ. ಎಸ್. ಎಂ. ಬಸವರಾಜು ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ ಮಾನಸಗಂಗೋತ್ರಿ ಮೈಸೂರು, ಇವರು ನೇಮಕಾತಿ ಸಂದರ್ಭದಲ್ಲಿ ಪಿಹೆಚ್.ಡಿ ಪದವಿಯನ್ನು ಪಡೆಯದೆ ಇರುವ ಬಗ್ಗೆ ಕೇಂದ್ರ ಲೆಕ್ಕಪರಿಶೋಧಕರು ಸಲ್ಲಿಸಿದ ಅಕ್ಷೇಪಣೆಯ ಬಗ್ಗೆ |
| ತೀರ್ಮಾನ | ಡಾ. ಎಸ್. ಎಂ. ಬಸವರಾಜು ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ ಮಾನಸಗಂಗೋತ್ರಿ ಮೈಸೂರು, ಇವರು ನೇಮಕಾತಿ ಸಂದರ್ಭದಲ್ಲಿ ಪಿಹೆಚ್.ಡಿ ಪದವಿಯನ್ನು ಪಡೆಯದೆ ಇರುವ ಬಗ್ಗೆ ಕೇಂದ್ರ ಲೆಕ್ಕಪರಿಶೋಧಕರು ಸಲ್ಲಿಸಿದ ಆಕ್ಷೇಪಣೆಯನ್ನು ಸಿಂಡಿಕೇಟ್ ಸಭೆಯು ಗಮನಿಸಿತು. ಡಾ. ಎಸ್.ಎಂ.ಬಸವರಾಜು ದಿನಾಂಕ 30-09-2019ರಂದು ಪಿಎಚ್.ಡಿ ಪದವಿಯನ್ನು ಪಡೆದಿರುವುದರಿಂದ, ಈ ದಿನಾಂಕದಂದು ಯುಜಿಸಿ ನಿಯಮಾನುಸಾರ ವಿದ್ಯಾರ್ಹತೆಯನ್ನು ಪೂರೈಸಿರುತ್ತಾರೆ. ಆದುದರಿಂದ ಸದರಿ ಅಧ್ಯಾಪಕರಿಂದ ಸೂಕ್ತ ಮುಚ್ಚಳಿಕೆ ಪಡೆದು ಪಿಎಚ್.ಡಿ ಪದವಿ ಪಡೆದ ದಿನಾಂಕದಿಂದ ವೇತನವನ್ನು ನಿಗಧಿಪಡಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **2020/1.19** | ಹೊಸ ಟ್ರಾಕ್ಟರ್/ಟ್ರಾಲಿ ಮತ್ತು ಟ್ಯಾಂಕರ್ ಖರೀದಿ ಬಗೆಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿಯ ವಿವಿಧ ವಿಭಾಗಗಳ ಮುಂಭಾಗ ಮತ್ತು ಮುಖ್ಯ ರಸ್ತೆಗಳ ಎರಡು ಬದಿಗಳಲ್ಲಿ ನೆಡಲಾಗಿರುವ ರಕ್ತ ಚಂದನ ಗಿಡಗಳಿಗೆ ನೀರು ಸರಬರಾಜು ಮಾಡಲು ಮಹೀಂದ್ರ ಟ್ರಾಕ್ಟರ್-475/ಟ್ರಾಲಿ ಮತ್ತು ಟ್ಯಾಂಕರುಗಳನ್ನು GeM (Govt e-Market Place) ಮುಖೇನ ರೂ.9.00 ಲಕ್ಷಗಳ ಮಿತಿಯಲ್ಲಿ ಖರೀದಿಸಲು (ತೆರಿಗೆ ಹೊರತುಪಡಿಸಿ) ಹಾಗೂ ಸದರಿ ವೆಚ್ಚವನ್ನು 2020-21ನೇ ಸಾಲಿನ ಆಂತರಿಕ ಸಂಪನ್ಮೂಲಗಳಿಂದ ಭರಿಸುವ ವಿಷಯವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.20** | 2016-17ನೇ ಸಾಲಿನ ಆಯವ್ಯಯ ಅಂದಾಜಿನ ವೆಚ್ಚ ಶೀರ್ಷಿಕೆ 228ರಲ್ಲಿ ನಿಗಧಿ ಪಡಿಸಿದ ಮೊತ್ತಕ್ಕಿಂತ ಹೆಚ್ಚುವರಿ ವೆಚ್ಚವಾಗಿರುವ ಬಗ್ಗೆ ಘಟನೋತ್ತರ ಅನುಮೋದನೆಗಾಗಿ. |
| | 2016-17ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ತಾತ್ಕಾಲಿಕ ಅಧ್ಯಾಪಕರ ವೇತನ ಶೀರ್ಷಿಕೆ 228ಕ್ಕೆ ರೂ.9,00,00,000/-ಗಳನ್ನು ನಿಗದಿಪಡಿಸಲಾಗಿದ್ದು ರೂ.9,95,81,981/-ಗಳು ವೆಚ್ಚವಾಗಿರುತ್ತದೆ ಹಾಗೂ ಶೀರ್ಷಿಕೆ 229ಕ್ಕೆ ರೂ.8,00,00,000/-ಗಳನ್ನು ನಿಗದಿಪಡಿಸಲಾಗಿದ್ದು ರೂ.17,79,81,924/-ಗಳು ಮಾತ್ರ ವೆಚ್ಚವಾಗಿರುತ್ತದೆ ಎಂದು ಸಭೆಯಲ್ಲಿ ಹಣಕಾಸು ಅಧಿಕಾರಿಗಳು ವಿವರಿಸಿದರು. |
| ತೀರ್ಮಾನ | ತಾತ್ಕಾಲಿಕ ಅಧ್ಯಾಪಕರ ವೇತನ ಶೀರ್ಷಿಕೆ-228ರ ಆಡಿಟ್ ಆಕ್ಷೇಪಣೆಯನ್ನು ಕೈಬಿಡಿಸುವ ಸಂಬಂಧ ಒಟ್ಟಾರೆ ಹೆಚ್ಚುವರಿಯಾಗಿ ವೆಚ್ಚವಾಗಿರುವ ರೂ 95,81,981/-ಗಳನ್ನು 2016-17ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಲಾಗುವ ವಿಷಯವನ್ನು ಘಟನೋತ್ತರ ಅನುಮೋದನೆಗಾಗಿ ದಿನಾಂಕ 21-12-2019ರಂದು ನಡೆದ ಹಣಕಾಸು ಸಮಿತಿ ಸಭೆಯ ಅನುಮೋದನೆ ಪಡೆದಿರುವ ವಿಷಯವನ್ನು ಸಿಂಡಿಕೇಟ್ ಸಭೆಯು ಗಮನಿಸಿ ಅನುಮೋದಿಸಿತು. |
| **2020/1.21** | ಮೈಸೂರು ವಿಶ್ವವಿದ್ಯಾನಿಲಯದ 2020-21ನೇ ಸಾಲಿನ ಯೋಜನೇತರ ಆಯವ್ಯಯ ಅಂದಾಜಿನ ವಿವರಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಬ್ಲಾಕ್ ಅನುದಾನ ಬಿಡುಗಡೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ. |
| ತೀರ್ಮಾನ | ಸರ್ಕಾರಕ್ಕೆ 2020-21ನೇ ಸಾಲಿಗೆ ರೂ.178,50,000/-ಗಳ ಬ್ಲಾಕ್ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಲಾಗಿರುವ ವಿಷಯವನ್ನು ದಿನಾಂಕ 21-12-2019ರಂದು ಜರುಗಿದ ಹಣಕಾಸು ಸಮಿತಿ ಸಭೆಯು ಅನುಮೋದನೆ ನೀಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯು ಗಮನಿಸಿ, ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ಸಭೆಯು ಅನುಮೋದಿಸಿತು. |

| | |
|---|---|
| **2020/1.22** | 2019–20ನೇ ಶೈಕ್ಷಣಿಕ ಸಾಲಿನಲ್ಲಿ ಎನ್.ಎಸ್.ಎಸ್/ಎನ್.ಸಿ.ಸಿ/ಕ್ರೀಡೆ ಮತ್ತು ಇತರೆ ವಿಶೇಷ ಖೋಟದ ಅಡಿಯಲ್ಲಿ ಸೀಟುಗಳನ್ನು ಹಂಚಲು ಕಾರ್ಯನಿರ್ವಹಿಸಿದ ಸಿಬ್ಬಂದಿ ವರ್ಗದವರಿಗೆ ಗೌರವಧನ ನೀಡಿರುವ ಬಗ್ಗೆ. |
| **ತೀರ್ಮಾನ** | ಆಡಳಿತ ಶಾಖೆಯಲ್ಲಿನ ಕೆಲವು ಉದ್ಯೋಗಿಗಳಿಗೆ ಅಲ್ಪ ಪ್ರಮಾಣದ ಸಂಭಾವನೆ/ಗೌರವಧನ ನೀಡುವ ಪರಿಪಾಠವಿದ್ದು ಮತ್ತು ಈ ರೀತಿ ಕಛೇರಿ ವೇಳೆಯ ನಂತರ ಹೆಚ್ಚು ಸಮಯ ನಿರಂತರವಾಗಿ ಮತ್ತು ಸಾರ್ವಜನಿಕ ರಜಾ ದಿನಗಳಲ್ಲಿ ಕೆಲಸ ಮಾಡುವ ಸನ್ನಿವೇಶವಿದ್ದಾಗ ಗೌರವಧನ ಅಥವಾ ವಿಶೇಷ ವೇತನವನ್ನು ಕೇಳುವುದು ನ್ಯಾಯಸಮ್ಮತವೆಂದು ಕೆ.ಸಿ.ಎಸ್.ಆರ್. ನಿಯಮ 28(ಬ) ಟಿಪ್ಪಣಿ 1 (ಬಿ) ರಲ್ಲಿ ಉಲ್ಲೇಖಿಸಲಾಗಿದೆ ಮತ್ತು ಅದನ್ನು ದೃಢೀಕರಿಸಿದೆ. ಸದರಿ ದೃಢೀಕರಣದಂತೆ ಮಾನ್ಯ ಕುಲಪತಿಗಳು ರೂ. 1.25 ಲಕ್ಷಗಳನ್ನು ಗೌರವಧನವನ್ನಾಗಿ ಮಂಜೂರು ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **2020/1.23** | 2019–20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯ ಬಗ್ಗೆ. |
| **ತೀರ್ಮಾನ** | 2019–20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿ/ಶಿಫಾರಸ್ಸನ್ನು ಗಮನಿಸಿ ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.24** | 2019–20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯ ಬಗ್ಗೆ. |
| ತೀರ್ಮಾನ | 2019–20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿ/ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.25** | 2019–20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯ ಬಗ್ಗೆ. |
| ತೀರ್ಮಾನ | 2019–20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿ/ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.26** | 2019–20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯ ಬಗ್ಗೆ. |
| ತೀರ್ಮಾನ | 2019–20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿ/ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.27** | 2019–20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯ ಬಗ್ಗೆ. |
| ತೀರ್ಮಾನ | 2019–20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿ/ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.28** | 2019–20ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯ ಬಗ್ಗೆ. |

| | |
|---|---|
| **ತೀರ್ಮಾನ** | 2019–20ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿ/ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.29** | 2019–20ನೇ ಶೈಕ್ಷಣಿಕ ಸಾಲಿನ ಮಂಡ್ಯದ ಸರ್ಕಾರಿ ಮಹಾವಿದ್ಯಾಲಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯ ಬಗ್ಗೆ. |
| **ತೀರ್ಮಾನ** | 2019–20ನೇ ಶೈಕ್ಷಣಿಕ ಸಾಲಿನ ಮಂಡ್ಯದ ಸರ್ಕಾರಿ ಮಹಾವಿದ್ಯಾಲಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿ/ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.30** | 2019–20ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯ ಬಗ್ಗೆ. |
| **ತೀರ್ಮಾನ** | 2019–20ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿ/ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.31** | 2019–20ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯ ಬಗ್ಗೆ. |
| **ತೀರ್ಮಾನ** | 2019–20ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿ/ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.32** | ವೈ.ಎಸ್.ಸುಮನಶ್ರೀ, ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| **ತೀರ್ಮಾನ** | ವೈ.ಎಸ್.ಸುಮನಶ್ರೀ, ಸಂಶೋಧನಾ ಅಭ್ಯರ್ಥಿ, ಇವರ ಸಂಶೋಧನಾ ಅವಧಿಯು ದಿನಾಂಕ 23–05–2019ಕ್ಕೆ 07 ವರ್ಷಗಳು ಪೂರ್ಣಗೊಂಡಿದ್ದು ಈಗಾಗಲೇ ದಿನಾಂಕ 28–06–2019ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದ ಅನ್ವಯ ಇವರಿಗೆ ಹೆಚ್ಚುವರಿಯಾಗಿ ವಿಶೇಷ ದಂಡಶುಲ್ಕದೊಂದಿಗೆ ಆರು ತಿಂಗಳ ಅವಧಿಗೆ ವಿಸ್ತರಣೆಯನ್ನು ನೀಡಲಾಗಿರುತ್ತದೆ. ಆದರೆ ಈ ಅಭ್ಯರ್ಥಿಯು ಮತ್ತೊಮ್ಮೆ ಮನವಿಯನ್ನು ಸಲ್ಲಿಸಿ ನಿಗದಿತ ಅವಧಿಯಲ್ಲಿ ದಿನಾಂಕ 28-12-2019ರೊಳಗೆ ಮಹಾಪ್ರಬಂಧವನ್ನು ಸಲ್ಲಿಸಲು ಸಾಧ್ಯವಾಗುತ್ತಿಲವೆಂದು ತಿಳಿಸಿ ಹೆಚ್ಚುವರಿಯಾಗಿ ಮೂರು ತಿಂಗಳ ಕಾಲಾವಕಾಶವನ್ನು ಕೋರಿರುವುದರಿಂದ ಅವರಿಗೆ ರೂ. 50,000/– ದಂಡಶುಲ್ಕದೊಂದಿಗೆ ಇದೊಂದು ಬಾರಿಗೆ ಮಾತ್ರ ಮೂರು ತಿಂಗಳ ಕಾಲಾವಕಾಶ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.33** | ಶ್ರೀಮತಿ ಸಂಧ್ಯಾ ಜಿ. ಸಹ–ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಸ್ವಯಂ ನಿವೃತ್ತಿ ಪಡೆಯಲು ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | ಶ್ರೀಮತಿ ಸಂಧ್ಯಾ ಜಿ. ಸಹ ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 02–01–2020ರಂದು ಸ್ವಯಂ ನಿವೃತ್ತಿ ಕೋರಿ ಮನವಿ ಸಲ್ಲಿಸಿರುವುದನ್ನು ಮತ್ತು ಅವರ ಸೇವಾ ವಿವರಗಳನ್ನು ಪರಿಶೀಲಿಸಿದ ಸಿಂಡಿಕೇಟ್ ಇವರಿಂದ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಬಾಕಿ ಬರಬೇಕಾಗಿದ್ದಲ್ಲಿ ಅವರ ಉಪದಾನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳಿಂದ ಕಡಿತಗೊಳಿಸಲಾಗುವುದು ಎಂಬ ಷರತ್ತಿಗೊಳಪಟ್ಟು ಸದರಿಯವರಿಗೆ ದಿನಾಂಕ 27–12–2019ರಿಂದ ಜಾರಿಗೆ ಬಂದಂತೆ ಸ್ವಯಂ ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ (ಸೇವಾ ಷರತ್ತು) ಮಾರ್ಪಡಿಸಿದ ಅಧಿನಿಯಮಗಳು |

| | |
|---|---|
| | 1984ರ ಪ್ರಕಾರ ಹಾಗೂ ಕೆ.ಸಿ.ಎಸ್.ಆರ್ ನಿಯಮ 285(1)(ಎ)ರ ಪ್ರಕಾರ ಸ್ವಯಂ ನಿವೃತ್ತಿ ಹೊಂದಲು ಸಭೆಯು ಅನುಮೋದಿಸಿತು. |
| **2020/1.34** | ಕೇಂದ್ರ ಲೆಕ್ಕಪರಿಶೋಧನ ಕಛೇರಿಯಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಕೆಯಾಗಿರುವ ಆಡಿಟ್ ವಿಚಾರಣೆಗಳ ಸಂಬಂಧ ಈವರೆಗೆ ಸರ್ಕಾರ/ಸಿ.ಎಜಿ ಕಛೇರಿಯಿಂದ ಬಂದಿರುವ ನಿರ್ದೇಶನದಂತೆ ಕ್ರಮ ಕೈಗೊಳ್ಳುವ ಬಗ್ಗೆ. |
| **ತೀರ್ಮಾನ** | ಈ ಬಗ್ಗೆ ಚರ್ಚಿಸಿದ ಸಿಂಡಿಕೇಟ್ ಸಭೆಯು ವಿವರಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವಿಷಯವನ್ನು ಮರುಮಂಡಿಸಲು ತೀರ್ಮಾನಿಸಿತು. |
| **2020/1.35** | Payment of expenses incurred, to the University Advocate towards filling Writ Appeals before the Hon'ble High Court of Karnataka against the Judgement Passed by learned Single Judge in Temporary/ Guest Lecturers Cases-reg. |
| **ತೀರ್ಮಾನ** | ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ/ಅತಿಥಿ ಉಪನ್ಯಾಸಕರುಗಳನ್ನು ಸೇವೆಯಲ್ಲಿ ನಿಯತಗೊಳಿಸುವ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಒಟ್ಟು 82 ಅತಿಥಿ ಉಪನ್ಯಾಸಕರ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸಲು ತಗುಲಿದ ವೆಚ್ಚ ರೂ.3,43,363/– ಗಳನ್ನು ಪಾವತಿಸುವಂತೆ ವಿಶ್ವವಿದ್ಯಾನಿಲಯದ ವಕೀಲರಾದ ಶ್ರೀ ಟಿ.ಪಿ.ರಾಜೇಂದ್ರಕುಮಾರ್ ಸಂಗೇ ಅವರು ತಮ್ಮ ಮನವಿ ಪತ್ರದಲ್ಲಿ ಕೋರಿರುವುದನ್ನು ಗಮನಿಸಿದ ಸಿಂಡಿಕೇಟ್ ಸಭೆಯು ಸದರಿ ಮೊತ್ತವನ್ನು ಪಾವತಿಸಲು ಅನುಮೋದಿಸಿತು. |
| **2020/1.36** | ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹ ಹಂಚಿಕೆಗೆ ಸಂಬಂಧಿಸಿದಂತೆ ಮಾರ್ಗಸೂಚಿ ಸಿದ್ಧಪಡಿಸಲು ರಚಿಸಿರುವ ಸಮಿತಿ ಸಭೆಯ ನಡಾವಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಬಗ್ಗೆ |
| | ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳ ವರ್ಗೀಕರಣ, ಹಂಚಿಕೆ ಸಂಬಂಧ ಹಂಚಿಕೆಗೆ ಮಾರ್ಗಸೂಚಿ ಸಿದ್ಧಪಡಿಸಲು ರಚಿಸಿರುವ ಸಮಿತಿಯು ದಿನಾಂಕ 13–01–2020ರಂದು ಜರುಗಿದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಹಣಕಾಸು ಅಧಿಕಾರಿಗಳು ಮತ್ತು ಕುಲಸಚಿವ (ಪರೀಕ್ಷಾಂಗ)ರವರು ಸಭೆಯಲ್ಲಿ ವಿವರಿಸಿದರು. |
| **ತೀರ್ಮಾನ** | ದಿನಾಂಕ 13–01–2020ರಂದು ಜರುಗಿದ ಸಭೆಯ ತೀರ್ಮಾನದಂತೆ ಪ್ರಸ್ತುತ ಹಣಕಾಸು ವರ್ಷದಿಂದಲೇ ಜಾರಿಗೆ ಬರುವಂತೆ, ವಸತಿಗೃಹಗಳನ್ನು ಹಂಚಿಕೆ ಮಾಡುವಾಗ ಹುದ್ದೆಯ ಅನುಸಾರ ಮೀಸಲಿಟ್ಟ ವಸತಿಗೃಹಗಳನ್ನು ಹಂಚಿಕೆ ಮಾಡಿ, ಅವರ ಮನೆಬಾಡಿಗೆ ಭತ್ಯೆಯನ್ನಷ್ಟೇ ವೇತನದಿಂದ ಕಟಾಯಿಸಲು ಹಾಗೂ ಆದಾಯ ತೆರಿಗೆ ಲೆಕ್ಕಾಚಾರ ಮಾಡುವಾಗ Perquisite Value ಮೊತ್ತವನ್ನು ಮತ್ತು ಲೈಸನ್ಸ್ ಶುಲ್ಕವನ್ನು ಆದಾಯ ತೆರಿಗೆ ಲೆಕ್ಕಾಚಾರಕ್ಕೆ ಸೇರಿಸದಿರಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.37** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ 7ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ನು ಜಾರಿಗೊಳಿಸಲು ಕುರಿತಂತೆ ಪರಿನಿಯಮಾವಳಿಗೆ ಅನುಮೋದನೆ ನೀಡಿರುವ ಕುರಿತು. |
| **ತೀರ್ಮಾನ** | ಸನ್ಮಾನ್ಯ ಕುಲಾಧಿಪತಿಯವರು ದಿನಾಂಕ 30–11–2019 ರಂದು ಅನುಮೋದನೆಯನ್ನು ನೀಡಲಾಗಿರುವ ಬಗ್ಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ), ಬೆಂಗಳೂರು ಅವರ ಪತ್ರ ಸಂಖ್ಯೆ ಇಡಿ 20 ಯುಎಮವಿ 2019, ದಿನಾಂಕ 24–12–2019ರ ಪತ್ರದನ್ವಯ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 7ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ನು ಜಾರಿಗೊಳಿಸಲು ಕುರಿತಂತೆ ಪರಿನಿಯಮಾವಳಿಗೆ ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| **2020/1.38** | ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ಹಸ್ತಪ್ರತಿಗಳನ್ನು ತಂತ್ರಜ್ಞಾನ ಬಳಸಿ ಸಂರಕ್ಷಿಸುವ ಬಗ್ಗೆ |
| ತೀರ್ಮಾನ | ಈ ಬಗ್ಗೆ ಚರ್ಚಿಸಿದ ಸಿಂಡಿಕೇಟ್ ಸಭೆಯು ವಿವರಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವಿಷಯವನ್ನು ಮರುಮಂಡಿಸಲು ತೀರ್ಮಾನಿಸಿತು. |
| **2020/1.39** | 2019–20ನೇ ಸಾಲಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಒಟ್ಟು 10 ಸಂದರ್ಶಕ ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಇದ್ದು ಪ್ರಸ್ತುತ 05 ವಿಶ್ರಾಂತ ಪ್ರಾಧ್ಯಾಪಕರುಗಳನ್ನು ಮಾಹೆಯಾನ ರೂ.25,000/–ಗಳ ವೇತನದೊಂದಿಗೆ ಸಂದರ್ಶಕ ಪ್ರಾಧ್ಯಾಪಕರುಗಳ ನೇಮಕ ಮಾಡಿಕೊಳ್ಳಬಹುದಾಗಿದೆ ಎಂದು ಸಭೆಗೆ ವಿವರಿಸಿದರು. ಡಾ. ಈ.ಸಿ.ನಿಂಗರಾಜೇಗೌಡ ರವರು ಮಾತನಾಡಿ ಶ್ರೀ ಬಿ.ಎಚ್.ಸುರೇಶ್‌ರವರನ್ನು ಚಾಮರಾಜನಗರ/ಮಂಡ್ಯ ಸ್ನಾತಕೋತ್ತರ ಕೇಂದ್ರಗಳಿಗೆ ಬೋಧನೆ ಮಾಡುವ ಸಲುವಾಗಿ ನೇಮಿಸಲು ಕುಲಪತಿಗಳಿಗೆ ಸೂಚಿಸಿದರು. ಇದಕ್ಕೆ ಉತ್ತರಿಸಿದ ಮಾನ್ಯ ಕುಲಪತಿಗಳು ವಾರಕ್ಕೊಮ್ಮೆ ಭೇಟಿ ನೀಡಿ ಬೋಧನಾಕಾರ್ಯ ಕೈಗೊಳ್ಳುವಂತೆ ಸೂಚಿಸಬಹುದು ಎಂದು ಅಭಿಪ್ರಾಯಿಸಿದರು. |
| ತೀರ್ಮಾನ | 2019–20ನೇ ಸಾಲಿಗೆ ಸಂದರ್ಶಕ ಪ್ರಾಧ್ಯಾಪಕರುಗಳನ್ನಾಗಿ (1) ಡಾ. ಹೆಚ್.ಎನ್.ರಾಮಸ್ವಾಮಿ, (2) ಡಾ. ಕೆ.ಪಿ.ಪರಮಶಿವಯ್ಯ, (3) ಡಾ. ಕೃಷ್ಣಮೂರ್ತಿ ಹನೂರು, (4) ಡಾ.ಬಿ.ಎಚ್.ಸುರೇಶ್, ಮತ್ತು (5) ಡಾ.ಲಲಿತ ರಂಗರಾಜನ್‌ರವರನ್ನು ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.40** | ನಿರ್ದೇಶಕರು, EMMRC ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇವರು ಕೇಂದ್ರದ ವ್ಯವಹಾರವನ್ನು ಎಸ್‌ಪಿಎಸ್ ಖಾತೆಯಿಂದ ಪ್ರತ್ಯೇಕಿಸಿ ಕೇಂದ್ರದ ಮೂಲ ಬ್ಯಾಂಕ್ ಖಾತೆ ಸಂಖ್ಯೆ 64195528043 ರಲ್ಲಿ ಮುಂದುವರಿಸುವ ಬಗೆಗೆ. |
| ತೀರ್ಮಾನ | EMMRC ಕೇಂದ್ರದ ವ್ಯವಹಾರವನ್ನು ಎಸ್‌ಪಿಎಸ್ ಖಾತೆಯಿಂದ ಪ್ರತ್ಯೇಕಿಸಿ ಮೂಲ ಬ್ಯಾಂಕ್ ಖಾತೆ ಸಂಖ್ಯೆ 64195528043ಅನ್ನು EMMRC ನಿರ್ದೇಶಕರು ಮತ್ತು ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ಜಂಟಿ ಖಾತೆಯನ್ನು ತೆರೆದು ಕಾರ್ಯನಿರ್ವಹಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.41** | ಮೇಘಶ್ರೀ ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ |
| ತೀರ್ಮಾನ | ಶ್ರೀಮತಿ ಮೇಘಶ್ರೀ ಇವರ ಪಿಎಚ್.ಡಿ ಸಂಶೋಧನಾ ಅವಧಿಯು ದಿನಾಂಕ 28–12–2019ಕ್ಕೆ 07 ವರ್ಷ ಆರು ತಿಂಗಳು ಪೂರ್ಣಗೊಂಡಿದ್ದು ಇವರು 'ವೈರಲ್ ಹೆಪಟೈಟಿಸ್'ನಿಂದ ಬಳಲುತಿದ್ದ ಕಾರಣ ನಿಗದಿತ ಸಮಯದೊಳಗೆ ಮಹಾಪ್ರಬಂಧವನ್ನು ಸಲ್ಲಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿ ಹೆಚ್ಚುವರಿ 02 ತಿಂಗಳುಗಳ ಕಾಲಾವಕಾಶವನ್ನು ಕೋರಿರುವ ಹಿನ್ನೆಲೆಯಲ್ಲಿ ಇವರಿಗೆ ರೂ.25,000/– ದಂಡಶುಲ್ಕದೊಂದಿಗೆ ಸಂಶೋಧನಾ ಅವಧಿ 02 ತಿಂಗಳಿಗೆ ವಿಸ್ತರಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br><br>ನಂತರ ಮಾನ್ಯ ಕುಲಪತಿಗಳು ಮಾತನಾಡಿ ಸಂಶೋಧನಾ ಅವಧಿ ವಿಸ್ತರಣೆ ಕೋರಿ ಬರುತ್ತಿರುವ ಅರ್ಜಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ಪಿಎಚ್.ಡಿ ವಿನಿಯಾಮಾವಳಿಯನ್ನು ಪರಿಷ್ಕರಿಸುವುದಕ್ಕೆ ಒಂದು ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು. ಕುಲಸಚಿವ (ಪರೀಕ್ಷಾಂಗ) ರವರಿಗೆ 07 ವರ್ಷದೊಳಗೆ ಪಿಎಚ್.ಡಿ.ಯನ್ನು ಪೂರೈಸುವ ಸಂಬಂಧ ಒಂದು ಸುತ್ತೋಲೆಯನ್ನು ಹೊರಡಿಸಲು ನಿರ್ದೇಸಿದರು. |
| **2020/1.42** | Promotions to University Teachers Under UGC CAS |
| ತೀರ್ಮಾನ | The recommendations of the Selection Committee and Screening cum Evaluation Committees of various subjects for promotion of teachers in |

| | |
|---|---|
| | respective subjects and to the higher AGP placed before the Syndicate (Appendix – A) are approved.<br><br>Further, the Syndicate decided to extend the monetary benefits to the teachers who have applied/submitted their applications on or before 31-12-2018 in the prescribed form are eligible from 1st February 2019 OR from the date of eligibility whichever is later.<br><br>The Syndicate also resolved to extend the monetary benefits to the teachers from the date of decision of the Syndicate (17-01-2020) or from the date of eligibility whichever is later for those who have applied/submitted during the calendar year (2019) to the higher positions vide Circular No. ET-8/126/2014-15 Dated 1-2-2019 and other Notifications notified in the earlier dates. |
| **2020/1.43** | ದಿನಾಂಕ 16–01–2020 ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಕಸ ನಿರ್ವಹಣೆ ಸಂಬಂಧ ಜರುಗಿದ ಸಭೆಯ ನಡಾವಳಿಯ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಆವರಣದ ಕಸ ವಿಲೇವಾರಿ ನಿರ್ವಹಣೆ ಮಾಡುತ್ತಿರುವ ಮೆ: ಜೈ ಕೀರ್ತಿಪ್ರಭ ಖಾಸಗಿ ಸಂಸ್ಥೆಯ ಸೇವೆಯನ್ನು 2020ರ ಜನವರಿ ತಿಂಗಳ ಅಂತ್ಯದವರೆಗೆ ಉಪಯೋಗಿಸಿಕೊಂಡು ಮುಂದಿನ ತಿಂಗಳಿಂದ ವಿಶ್ವವಿದ್ಯಾನಿಲಯದ ತೋಟಗಾರಿಕೆ ವಿಭಾಗದ ಸಹಾಯಕ ನಿರ್ದೇಶಕರ ಉಸ್ತುವಾರಿಯಲ್ಲಿ ಅವಶ್ಯಕ ಸಿಬ್ಬಂದಿಯನ್ನು ನೇಮಿಸಿಕೊಂಡು ಕಸ ವಿಂಗಡಣೆ ಮತ್ತು ಕಸ ವಿಲೇವಾರಿ ಕೆಲಸಗಳನ್ನು ಕೈಗೊಳ್ಳಲು ತೀರ್ಮಾನಿಸಿರುವುದಾಗಿ ಹೇಳಿದ ಮಾನ್ಯ ಕುಲಪತಿಗಳ ಮಾತಿಗೆ ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/1.44** | Promotion by selection to the posts of the Deputy Registrars. |
| ತೀರ್ಮಾನ | ಶ್ರೀಮತಿ ಯಶೋಧಮ್ಮ, ಉಪ ಕುಲಸಚಿವರು (ಪ್ರಭಾರ) ಇವರಿಗೆ ಅಫಿಷಿಯೇಟಿಂಗ್ ಆಧಾರದ ಮೇಲೆ ಪದೋನ್ನತಿ ನೀಡಲು ಹಾಗೂ ಆಯ್ಕೆಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

**ಇತರೆ ವಿಷಯಗಳು:**

- ಮಾನ್ಯ ಕುಲಪತಿಗಳು ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಬೋಧಕ ವರ್ಗದವರ ಹುದ್ದೆವಾರು ವಿವರಗಳನ್ನು ಸಭೆಯಲ್ಲಿ ಓದಿ ತಿಳಿಸಿದರು.
- ಶ್ರೀಮತಿ ಸಿಂಧು ಸುರೇಶ್‌ರವರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿ ದಿನಾಂಕ 08-01-2020ರಂದು ಜರುಗಿದ ಅಹಿತಕರ ಘಟನೆಯ ಬಗ್ಗೆ ವಿವರಣೆ ನೀಡಬೇಕೆಂದು ಕೇಳಿದಾಗ ಕುಲಸಚಿವರು ಘಟನೆಯ ಬಗ್ಗೆ ಮತ್ತು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಗೆ ವಿವರಿಸಿದರು. ಮಾನ್ಯ ಕುಲಪತಿಗಳು ಮಾತನಾಡಿ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕರನ್ನು ಈ ಬಗ್ಗೆ ವರದಿ ಕಳುಹಿಸುವಂತೆ ತಿಳಿಸಿರುವುದಾಗಿ ಹೇಳಿದರು ಮತ್ತು ಪ್ರಕರಣವು ನ್ಯಾಯಾಲಯದಲ್ಲಿರುವುದರಿಂದ ಕ್ರಮಕೈಗೊಳ್ಳಲು ತಮಗೆ ಆಗುತ್ತಿಲ್ಲವೆಂದು ತಿಳಿಸಿದರು. ಸಿಂಡಿಕೇಟ್ ಸದಸ್ಯರೊಬ್ಬರು ಮಾತನಾಡಿ, ಸ್ನಾತಕೋತ್ತರ ಹಳೆಯ ವಿದ್ಯಾರ್ಥಿನಿಲಯದ ಕೊಠಡಿಗಳನ್ನು ಪರಿಶೀಲನೆ ನಡೆಸುವಂತೆ ಹಾಗೂ

ವಿದ್ಯಾರ್ಥಿಗಳ ವರ್ತನೆಯ ಬಗ್ಗೆ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳುವಂತೆ ಮಾನ್ಯ ಕುಲಪತಿಗಳನ್ನು ಒತ್ತಾಯಿಸಿದರು. ಇದಕ್ಕೆ ಉತ್ತರಿಸಿದ ಮಾನ್ಯ ಕುಲಪತಿಗಳು ಏಕಾಏಕಿ ವಿದ್ಯಾರ್ಥಿಗಳನ್ನು ಹಾಸ್ಟಲ್‌ನಿಂದ ಹೊರಹಾಕಲು ಸಾಧ್ಯವಿಲ್ಲ. ಬದಲಾಗಿ ಅವರಿಗೆ ನೋಟೀಸ್ ಕೊಟ್ಟು ಹಂತಹಂತವಾಗಿ ಕ್ರಮಕೈಗೊಳ್ಳಬೇಕಾಗುತ್ತದೆ ಎಂದರು.

ಈ ಬಗ್ಗೆ ಕೂಲಂಕಷವಾಗಿ ಅಧ್ಯಯನ ನಡೆಸಿ ವರದಿಯನ್ನು ನೀಡಲು ಒಂದು ಸಮಿತಿಯನ್ನು ರಚಿಸಲು **ಮತ್ತು ಸಮಿತಿ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು.**

- ವಿಶ್ವವಿದ್ಯಾನಿಲಯವು ಪ್ರಸಕ್ತ ವರ್ಷ 100ನೇ ಘಟಿಕೋತ್ಸವವನ್ನು ಆಚರಿಸಲಿದ್ದು ಫೆಬ್ರವರಿ ಕೊನೆಯಲ್ಲಿ ಅಥವಾ ಮಾರ್ಚ್ ಕೊನೆಯಲ್ಲಿ ಘಟಿಕೋತ್ಸವವನ್ನು ಹಮ್ಮಿಕೊಳ್ಳಲಾಗುವುದು ಎಂದು ಮಾನ್ಯ ಕುಲಪತಿಗಳು ಸಭೆಗೆ ಮಾಹಿತಿ ನೀಡಿದರು.

ಕೊನೆಯಲ್ಲಿ ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿನ ಸದಸ್ಯರುಗಳಿಗೆ ವಂದನೆಗಳನ್ನು ತಿಳಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ** **ಕುಲಪತಿ ಮತ್ತು ಅಧ್ಯಕ್ಷರು**